## " ಥಿಯೇಟರ್ ಥೆರಪಿ"

ಥಿಯೇಟರ್ ಥೆರಪಿ ರಂಗ ತಂಡ ನೂತನವಾಗಿ ಹೊರ ಹೊಮ್ಮುತ್ತಿರುವ ಒಂದು ವಿದ್ಯುದಾಗರ. ರಂಗಕಲೆ ಹಾಗೂ ಸಮಾಜಮುಖಿ ಚಿಂತನೆಗಳೊಂದಿಗೆ, ಸಮಾಜದಲ್ಲಿ ಕಾಣಸಿಗುವ ನಿರಂತರ ನಿತ್ಯ-ಸತ್ಯ ಸಮಸ್ಯೆಗಳಾದ ಪರಿಸರದ ಅವನತಿ, ಅಸಹಿಷ್ಣುತೆ, ಕಲೆ-ಸಂಸ್ಕೃತಿಗಳ ಅಳಿವು, ನಿರುದ್ಯೋಗ, ಅನಕ್ಷರತೆ, ಸಾಮಾಜಿಕ ಸ್ಥರಗಳಲ್ಲಿ ಸ್ತ್ರೀ ತಾರತಮ್ಯ, ಜೀವನಾಧಾರ ಭದ್ರತೆಗಳ ಅಸ್ತವ್ಯಸ್ತ ಸ್ಥಿತಿಗತಿ ಹೀಗೆ ಹಲವಾರು ಮಹತ್ವಪೂರ್ಣ ಅಂಶಗಳನ್ನು ರಂಗಭೂಮಿಯ (ಥಿಯೇಟರ್) ವಿಭಿನ್ನ ರಂಗವತಾರಗಳು ಹಾಗೂ ಸಾಮಾಜಿಕ ಕಾಳಜಿಯುಳ್ಳ ಚಟುವಟಿಕೆಗಳ ಮೂಲಕ ಪರಿಹಾರದ ಜಾಗೃತಿ (ಥೆರಪಿ) ನೀಡುವುದು ಈ ತಂಡದ ಪ್ರಮುಖ ಧ್ಯೇಯವಾಗಿದೆ.

ಬಹುಕಾಲದ ಸಂಸ್ಕೃತಿಯ, ಬಹು ದೊಡ್ಡ ಜನಾಂಗದ ನೆಲೆಯಾಗಿರುವ ರಂಗಭೂಮಿಗೆ ಸೇವೆ ಸಮರ್ಪಿಸಲು ಐಕ್ಯತೆ, ಬದ್ಧತೆ ಹಾಗೂ ಆದರ್ಶಪ್ರಿಯತೆಯುಳ್ಳ ಯುವಪ್ರತಿಭೆಗಳನ್ನು ಗುರುತಿಸಿ, ಪ್ರೇರೇಪಿಸಿ **'ಭುವನ ವಂದನೀಯ'** ಕಾರ್ಯದೆಡೆಗೆ ಸಾಗುವ ಪ್ರಯತ್ನ ಈ ತಂಡದ ಆಶಯವಾಗಿದೆ. ಒತ್ತಡಗಳಿಗೆ ಸಿಲುಕಿರುವ ಎಲ್ಲಾ ಮನಸ್ಸುಗಳಿಗೆ, ನಾವ್ಯಾರೂ ಎಂದು ಅರಿತುಕೊಳ್ಳುವುದ್ದಾಕ್ಕಾಗಿ , ನಮ್ಮ ದಿನನಿತ್ಯ ಓಡುವಿನ ಲಯ ಹಿಡಿಯುದ್ದಾಕ್ಕಾಗಿ- ಥೆರಪಿಗಳು, ಆಧ್ಯಾತ್ಮ, ಮನರಂಜನೆ ಇತ್ಯಾದಿಗಳ ಅತ್ಯವಶ್ಯಕವಿದೆ. ಈ ರೀತಿಯ ಮನೋಲ್ಲಾಸ ಪಡೆಯಲು ಹಾಗೂ ತಾಂತ್ರಿಕ ಜಗತ್ತಿನ ಒತ್ತಡದಿಂದ ಹೊರಬರಲು, ಅನೇಕ ವೃತ್ತಿಯ ಸಮಾನ ಮನಸ್ಕರು, ರಂಗಕ್ರಿಯೆಯಲ್ಲಿ ಒಗ್ಗೂಡಿ ಕಟ್ಟಿರುವ ತಂಡವಿದು.



ನಮ್ಮ ತಂಡ ಪ್ರಸ್ತುತ ಪಡಿಸಿದ ಮೊದಲ ಪ್ರಯೋಗ **'ಪರಿತ್ಯಕ್ತ'.** ಕರ್ಣ ಜೀವನಾಧಾರಿತ ವಿಶಿಷ್ಟ ಕೃತಿ **ಶ್ರೀ ಅಂಬಾತನಯ ಮುದ್ರಾಡಿಯವರ** ರಚನೆ ಹಾಗೂ **ಶ್ರೀ 'ಕೃಷ್ಣಮೂರ್ತಿ ಕವತಾರ್'** ರವರು, ಯಕ್ಷಗಾನದ ವೈಶಿಷ್ಟ್ಯತೆ, ಹಾಗೂ ವಿನೂತನ ಸಂಗೀತದೊಂದಿಗೆ ನಾಟಕವನ್ನು ನಿರ್ದೇಶಿಸಿದ್ದು, ದಿನಾಂಕ 4 ಫೆಬ್ರವರಿ 2019 ರಂದು ಥಿಯೇಟರ್ ಥೆರಪಿ ತಂಡ ಕೆ. ಎಚ್ ಕಲಾಸೌಧದಲ್ಲಿ ಮೊದಲ ಯಶಸ್ವಿ ಪ್ರದರ್ಶನ ನೀಡಿತು. ಇಂದು ಪ್ರಸ್ತುತ ನಾಟಕತಂಡ, ತನ್ನ ರಂಗಶಿಸ್ತು ಮತ್ತು ನಿಷ್ಠ ಮಾದರಿಯಿಂದ ಹಲವು ಪ್ರದರ್ಶನಗಳನ್ನು ನೀಡುತ್ತಾ ಜನಮನ್ನಣೆ ಪಡೆಯುತ್ತಿದೆ.

## "ಸಾಲು ಮರಗಳ ತಾಯಿ ತಿಮ್ಮಕ್ಕ"



ಸಾಲು ಮರದ ತಿಮ್ಮಕ್ಕ ಇಂದಿನ ಭಾರತದ ಜನಜನಿತ ಹೆಸರು. ನೂರ ಎಂಟು ವರ್ಷದ ತಾಯಿ, ಕೋಟ್ಯಾಂತರ ಜನರ ಬದುಕಿನ ಪ್ರೇರಣೆ. ನೆರಳನ್ನು ನೀಡುವ ಮರಗಳಿಗೆ ಜೀವಜಲವಾದ ಸಾಧ್ವಿ ನಮ್ಮ ತಿಮ್ಮಕ್ಕನವರು. ಅಕ್ಷರ ಕಲಿಯದ, ಮಕ್ಕಳ ಪಡೆಯದ ತಾಯಿಯ ಕೊರಗು, ಸಾಲು ಸಾಲು ಮರಗಳಿಗೆ ಮಕ್ಕಳ ಪ್ರೀತಿ ತೋರಿಸಿ, ಜಗತ್ತಿಗೆ ಪರಿಸರ ಜಾಗೃತಿ ಮೂಡಿಸುವ ಆದರ್ಶಮಾತೆಯಾನ್ನಾಗಿಸಿತು. ತಾನು ನೆಡುವ ಗಿಡದ ನೆರಳಿಂದ ತನ್ನ ಸುತ್ತ-ಮುತ್ತಲಿನ ಜನರಿಗೆ ಒಳಿತಾಗಲೆಂದು ಶ್ರಮಿಸಿದವರು ನಮ್ಮ ಪ್ರೀತಿಯ ತಿಮ್ಮಕ್ಕ ಅಜ್ಜಿ. ಉಸಿರಾದ ಹಸಿರನ್ನು ಚಿಗುರಿಸಲು ತಿಮ್ಮಕ್ಕ ದಂಪತಿಗಳು ತಮ್ಮ ಊರಿನ ಮಾರ್ಗದ ಇಕ್ಕೆಲಗಳಲ್ಲಿ ಗಿಡ

ನೆಡುವ ಕಾಯಕವನ್ನು ಕೈಗೊಂಡು ಸುಮಾರು 4 ಕಿ.ಮೀ. ವ್ಯಾಪ್ತಿಯಲ್ಲಿ **385** ಆಲದ ವೃಕ್ಷಗಳು, **8000** ಇನ್ನಿತರ ಹಲವಾರು ಪರಿಸರ ಸ್ನೇಹಿ ಮರಗಳನ್ನು ನೆಟ್ಟು ಪರಿಸರ ಕಾಳಜಿಯ ವರ್ಚಸ್ಸನ್ನು ಬೀರುವುದರ ಮೂಲಕ ಪ್ರಭಾವಿ ವ್ಯಕ್ತಿ ಯಾದರು.

ತಿಮ್ಮಕ್ಕನವರ ಬದುಕು ಸುಖದ ಸಂಪತ್ತಿನಿಂದ ಕೂಡಿ, ಸಮಾಜಮುಖಿ ಕಾರ್ಯಗಳಿಗೆ ನೆರವಾಗುವಂತಿರಲಿಲ್ಲ. ದಮನಿತ ಸಮುದಾಯ, ಬಡತನ, ಜೀತಪದ್ಧತಿ, ಅನಕ್ಷರತೆ, ಬಂಜೆತನ, ಅಕಾಲ ವೈಧವ್ಯ ಹೀಗೆ ಹೆಣ್ಣೊಬ್ಬಳಿಗೆ ಬರಬಹುದಾದ ಎಲ್ಲಾ ಕಷ್ಟಗಳ ವಾರಸುದಾರರು ತಿಮ್ಮಕ್ಕನವರು, ತಮ್ಮ ಅಚಲ ಇಚ್ಛಾಶಕ್ತಿ ಮತ್ತು ಕಠಿಣ ಪರಿಶ್ರಮದಿಂದ ಬದುಕನ್ನು ಪ್ರೇರಣಾಪೂರ್ವವನ್ನಾಗಿಸಿಕೊಂಡವರು. **ಅವರ ಬದುಕಿನ ಹಾದಿ: ಕಠಿಣ, ಆದರ್ಶಮಯ ಹಾಗೂ ಸುಂದರವಾದ ಹಸಿರ ಹಬ್ಬ!** ಈ ಪರಿಸರ ಸಂರಕ್ಷಣೆಯ ಉತ್ತಮ ಸಾಧನೆಗಾಗಿ **'ಪದ್ಮಶ್ರೀ' ಬಿರುದಿನ** ಜೊತೆಗೆ ಹಲವಾರು ಪುರಸ್ಕಾರಗಳಿಂದ ಗೌರವಿಸಲ್ಪಟ್ಟಿದ್ದಾರೆ. ತಿಮ್ಮಕ್ಕನವರ ದತ್ತು ಪುತ್ರರಾದ ಪರಿಸರ ಸ್ನೇಹಿ ಡಾ. ಉಮೇಶ್, ಅವರ ಸಾಮಾಜಿಕ ಕಾಳಜಿಯ ದೃಷ್ಟಿಕೋನಕ್ಕೆ ಕನ್ನಡಿಯಾಗಿ, ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ ಮತ್ತು ಸಾಲು ಮರದ ತಿಮ್ಮಕ್ಕ ಇಂಟರ್ ನ್ಯಾಷನಲ್ ಫೌಂಡೇಶನ್, ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.



ಹೌದು, ತಿಮ್ಮಕ್ಕನವರಂತಹ ಅನೇಕ ಪರಿಸರ ಪ್ರೇಮಿಗಳು ಹುಟ್ಟಿದ್ದಾರೆ, ಇನ್ನೂ ಮುಂದೆಯೂ ಹುಟ್ಟುತ್ತಾರೆ, ಹುಟ್ಟಬೇಕಾಗಿರುವುದು ಈ ಭೂಮಿಯ ಈ ಕಾಲದ ತುರ್ತು ಅಗತ್ಯ! ಈ ಅಗತ್ಯವನ್ನು ಅರಿತು, ಥಿಯೇಟರ್ ಥೆರಪಿ ತಂಡ ತಿಮ್ಮಕ್ಕಜ್ಜಿ ಅವರ ವಾಸಗೃಹಕ್ಕೆ ತೆರಳಿ, ಅವರ ಮನದಾಳದ ಮಾತುಗಳನ್ನು ಪ್ರತ್ಯೇಕವಾಗಿ ಆಲಿಸಿ, ಅವರು ನೆಟ್ಟು ಬೆಳೆಸಿದ ಆಲದ ಮರಗಳನ್ನು ಕಂಡು ಆನಂದಿಸಿ, ಈ ಆದರ್ಶನೀಯ ಜೀವನ ಚರಿತ್ರೆಯನ್ನು ಪರಿಸರ ಜಾಗೃತಿಗಾಗಿ, ಹಸಿರಿನ ಉಳುವಿಗಾಗಿ, ಪರಿಸರ ಸಂಕುಲದ ಸಕಲ ಜೀವಿ ರಕ್ಷಣೆಗಾಗಿ: ನನಗಾಗಿ, ನಿನಗಾಗಿ, ನಮಗಾಗಿ ಮತ್ತು ಪ್ರಕೃತಿಯ ಉಳಿವಿಗಾಗಿ, **"ಸಾಲು ಮರಗಳ ತಾಯಿ - ತಿಮ್ಮಕ್ಕ" ನಾಟಕವನ್ನು, ಒಂದು ಪರಿಸರ ಪ್ರೇಮಿ ಹೆಜ್ಜೆಯಾಗಿ ನಿಮ್ಮ ಮುಂದೆ ಪ್ರಸ್ತುತ ಪಡಿಸುತ್ತಿದೆ.**





**ಶ್ರೀ ಬೇಲೂರು ರಘುನಂದನ್:** ಈ ನಾಡಿನ ಸಾಹಿತ್ಯ ಕ್ಷೇತ್ರದಲ್ಲಿ, ಕ್ರಿಯಾಶೀಲ-ಸೃಜನಶೀಲ ಲೇಖಕರು, ಯುವಕವಿ ಹಾಗೂ ನಾಟಕಕಾರರು, **"ಸಾಲು ಮರಗಳ ತಾಯಿ - ತಿಮ್ಮಕ್ಕ"** ನಾಟಕದ ರಚನಾಕಾರರು. **ಶ್ರೀ ರಾಮಕೃಷ್ಣ ಬೆಳ್ತೂರು:** ಕನ್ನಡದ ಹೆಸರಾಂತ ರಂಗಕರ್ಮಿ. ಪಾತ್ರಗಳಿಗೆ ಜೀವ ತುಂಬಿ, ವಸ್ತುಗಳಿಗೆ ಬಣ್ಣ ತುಂಬಿ, ವಿವಿಧ ಕರಕುಶಲತೆಯೊಂದಿಗೆ ಕನ್ನಡ ರಂಗಭೂಮಿಗೆ ಆಸ್ತಿಯಾಗಿರುವ ಇವರು ಈ ನಾಟಕವನ್ನು ನಿರ್ದೇಶಿಸಿದ್ದಾರೆ.

**ಮಳ್ಳೇನಹಳ್ಳಿ ದೇವರಾಜರವರ** ರಂಗಭೂಮಿಯ ಅನುಭವ ಮತ್ತು **ನವೀನ್ ಕೃಷಿಯವರ** ಅಪಾರ ಸಾಂಸ್ಕೃತಿಕ ಆಸಕ್ತಿ ಹಾಗೂ ಉತ್ಸುಕತೆಯ ರಂಗ ನಿರ್ವಹಣೆಯಿಂದ ನಾಟಕ ತಯಾರುಗೊಂಡಿದೆ. **ಈ ನಮ್ಮ ಪರಿಸರ ಪ್ರೇಮಿ ಹೆಜ್ಜೆಯ ಜೊತೆಗೆ ನೀವೂ ಹೆಜ್ಜೆಯಾಗಲು, ನಮ್ಮ ನಾಟಕವನ್ನು ಬಂದು ನೋಡಿ, ತಂಡವನ್ನು ಪ್ರೋತ್ಸಾಹಿಸಬೇಕೆಂಬುದು ನಮ್ಮ ಆಶಯ. ಹಾಗೆಯೇ ಈ ಸ್ಫೂರ್ತಿದಾಯಕ ಹಾಗೂ ಪ್ರಭಾವಿ ಕಥೆಯನ್ನು ನಿಮ್ಮ ಊರಿನಲ್ಲಾಗಲಿ, ಸಂಸ್ಥೆಯಲ್ಲಾಗಲಿ ಪ್ರದರ್ಶಿಸಲು ಇಚ್ಛಿಸಿದಾದಲ್ಲಿ ದಯವಿಟ್ಟು ಸಂಪರ್ಕಿಸಿ: ನವೀನ್ ಕೃಷಿ (ಮೊ.ಸಂಖ್ಯೆ: 8722939462)**